ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯವನ್ನು ಎಕ್ಸಾಮಿನ್ ಮಾಡುತ್ತೇನೆ.

ವಿಷಯ: (iv) ತೀರ್ಥಹಳ್ಳಿಯ ವಿಧಾನಸಭಾ ಕ್ಷೇತ್ರದಲ್ಲಿ ಯುಗಾದಿ ಹಬ್ಬಕ್ಕೆ ಸಕ್ಕರೆ ಬಾಚುಗಡೆ ಮಾಡುವಲ್ಲಿ ವಿಳಂಬವಾಗಿರುವುದು.

ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಹಬ್ಬಕ್ಕೆ ಸರಕಾರದವರು ಸಕ್ಕರೆಯನ್ನು ಬಿಡುಗಡೆ ಮಾಡಲಿಲ್ಲ. ನಮ್ಮ ಸಾರ್ವಜನಿಕರು ನಾವು ಹಬ್ಬಗಳಲ್ಲಿ ಸಕ್ಕರೆ ಉಪಯೋಗಿಸಬಾರದೆ ಎಂದು ಕೇಳುತ್ತಿದ್ದಾರೆ. ಹೀಗಾಗಿ ನಾವು ಸಕ್ಕರೆ ಇಲ್ಲದೆ ಹಬ್ಬ ಆಚರಿಸಬೇಕಾಯಿತು. ಸರಕಾರದವರು ಇಷ್ಟೊಂದು ದೊಡ್ಡ ಆಹಾರ ಇಲಾಖೆಯನ್ನು ಇಟ್ಟುಕೊಂಡು ನಮ್ಮ ಶಿವಮೊಗ್ಗ ಜಿಲ್ಲೆಯಾದ್ಯಂತ ನ್ಯಾಯಬೆಲೆ ಅಂಗಡಿಗಳಲ್ಲಿ ಸಕ್ಕರೆ ಸರಬರಾಜು ಮಾಡಿಲ್ಲವೆಂದರೆ ಇದರ ಅರ್ಥ ಏನು? ಈ ಕ್ಷಣದಲ್ಲಿಯೂ ಕೂಡ ಸಕ್ಕರೆ ಸರಬರಾಜಾಗಿಲ್ಲ. ನಿಮ್ಮ ಅಧಿಕಾರಿಗಳು ಇದ್ದಾರೋ? ನಿಮ್ಮ ಇಲಾಖೆ ಇದೆಯೋ? ಪಡಿತರ ಹಂಚಿಕೆಯ ವ್ಯವಸ್ಥೆಯನ್ನು ನೋಡಿಕೊಳ್ಳುವವರು ಯಾರು?

ಪಿ.ಎಂ. 5.26

(ಶ್ರೀ ಅಂಜನಮೂರ್ತಿ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಡಿ.ಬಿ. ಇನಾಂದಾರ್(ಸನ್ಮಾನ್ಯ ಆಹಾರ ಮತ್ತು ಪಡಿತರ ಪೂರೈಕೆ ಸಚಿವರು): ಮಾನ್ಯ ಅಧ್ಯಕ್ಷರೇ, ಫೆಬ್ರವರಿ ತಿಂಗಳವರೆಗೆ ಕೇಂದ್ರ ಸರಕಾರದವರು 20,452ಲಕ್ಷ ಮೆಟ್ರಿಕ್ ಟನ್ ಸಕ್ಕರೆಯನ್ನು ರಾಜ್ಯಕ್ಕೆ ಒದಗಿಸುತ್ತಾ ಇದ್ದರು. ಆದರೆ ಇದರ ಪ್ರಮಾಣವನ್ನು ಮಾರ್ಚ್ ತಿಂಗಳಲ್ಲಿ 8,636ಲಕ್ಷ ಮೆಟ್ರಿಕ್ ಟನ್‌ಗಳಿಗೆ ಇಳಿಸಿದ್ದಾರೆ. ಅದು ಕೂಡ 14-3-2001ಕ್ಕೆ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಅಲಾಟ್‌ಮೆಂಟ್ ಬಂದಿತ್ತು. ಶಿವಮೊಗ್ಗ ಜಿಲ್ಲೆಗೆ 395.9 ಮೆಟ್ರಿಕ್‌ಟನ್‌ಗಳನ್ನು ಅಲಾಟ್ ಮಾಡಿದ್ದೇವೆ. ಅದರಲ್ಲಿ ಭದ್ರಾವತಿ ಸಕ್ಕರೆ ಕಾರ್ಖಾನೆಯಿಂದ 164 ಮೆಟ್ರಿಕ್ ಟನ್. ಉಗಾರಖುರ್ದ ಫ್ಯಾಕ್ಟರಿಯಿಂದ 231 ಮೆಟ್ರಿಕ್‌ಟನ್‌ಗಳನ್ನು ಅಲಾಟ್‌ಮೆಂಟ್ ಮಾಡಲಾಯಿತು. ಈ ತಿಂಗಳ ಸರಬರಾಜಿನಲ್ಲಿ ಸ್ವಲ್ಪ ವಿಳಂಬವಾಗಿದೆ. ಏಕೆಂದರೆ ಮೂಲಭೂತವಾಗಿ ಅಲಾಟ್‌ಮೆಂಟ್ ನಮಗೆ ಬರಬೇಕಾದುದು ತಡವಾಗಿ ಬಂದುದರಿಂದ ಆದಷ್ಟು ಬೇಗನೆ ನಾವು ಕೊಡಲು ಆಗಲಿಲ್ಲ. ಆದರೂ ಕೂಡ ಈಗ ಕೊಡತಕ್ಕಂಥ ಅಲಾಟ್‌ಮೆಂಟ್‌ನಿಂದ ಹಸಿರುಕಾರ್ಡ್‌ದಾರರಿಗೆ ಅಥವಾ ಬಡತನರೇಖೆಗಿಂತ ಕೆಳಗೆ ಇರತಕ್ಕಂಥ ವರ್ಗದ ಕಾರ್ಡ್‌ದಾರರಿಗೆ ಮಾತ್ರ ಕೊಡಬೇಕೆನ್ನುವ ದೃಷ್ಟಿಯಿಂದ ಕೇಂದ್ರದವರು ನಮಗೆ ಕೊಡುವ ಕೋಟಾವನ್ನು ಇಳಿಸಿದ್ದಾರೆ. 20 ಸಾವಿರ ಮೆಟ್ರಿಕ್ ಟನ್ ಇದ್ದುದನ್ನು 8600 ಮೆಟ್ರಿಕ್ ಟನ್‌ಗಳಿಗೆ ಇಳಿಸಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಕುಟುಂಬವೊಂದಕ್ಕೆ ಎರಡು ಕಿಲೋ, ಪಾಗೂ ಪಟ್ಟಣ ಪ್ರದೇಶಗಳಲ್ಲಿ ಮೂರು ಕಿಲೋ ಪ್ರಮಾಣದಲ್ಲಿ ನಾವು ವ್ಯವಸ್ಥೆಯನ್ನು ಆಳವಡಿಸಿದ್ದೇವೆ. ಮುಂದಿನ ತಿಂಗಳು ನಮಗೆ ಎಷ್ಟು ಕೋಟಾ ಬರುತ್ತದೆ ಎಂದು ನೋಡಬೇಕಾಗಿದೆ. ಕೇಂದ್ರ ಸರಕಾರದವರ ಸಕ್ಕರೆ ಹಂಚಿಕೆಯ ನೀತಿಯು ಬದಲಾವಣೆಯಾಗಿರುವುದರಿಂದ ಈ ಪಡಿತರ ವ್ಯವಸ್ಥೆಯು ಎಷ್ಟು ಸಮಯ ಉಳಿಯುತ್ತದೆ ಅಥವಾ ಉಳಿಯುವುದಿಲ್ಲವೆನ್ನುವುದನ್ನು ನಾವು ಹೇಳುವುದಕ್ಕಾಗುವುದಿಲ್ಲ.

5.40 ಪಿ.ಎಂ

ಶ್ರೀ ಆರಗಜ್ಞಾನೇಂದ್ರ: ಅಲಾಟ್‌ಮೆಂಟು, ತಡ ಇವುಗಳ ಬಗ್ಗೆ ಮಾನ್ಯ ಸಚಿವರು ಹೇಳಿದರು. ಗ್ರಾಮಾಂತರ ಪ್ರದೇಶದ ಹಸಿರುಕಾರ್ಡಿನ ಜನ ಇವರು ಹೀಗೆ ಹೇಳಿದರು ಅಂದರೆ ಕೇಳಲು ಆಗುವುದೇ? ಹಸಿರು ಕಾರ್ಡ್ ಕೊಟ್ಟಿದ್ದೇ ಬಡತನದ ರೇಖೆ ಕೆಳಗಿದ್ದೀರಿ ಅಂತ, ಆ ಜನಕ್ಕೆ ಅಲಾಟ್‌ಮೆಂಟ್ ಮಾಡಿಸಿಕೊಡುವ ಜವಾಬ್ದಾರಿ ನಿಮ್ಮ ಸರ್ಕಾರಕ್ಕಿದೆ. ನಿಮ್ಮ ಅಧಿಕಾರಿಗಳ ಜವಾಬ್ದಾರಿ ಇದೆ. ಸಕ್ಕರೆ ಬೇಕಾದಷ್ಟು ಇದೆ ಅಂತ ನೀವೇ ಹೇಳುತ್ತೀರಿ, ಸಕ್ಕರೆ ಮೂಟೆಗೆ ಬೆಂಕಿ ಹಚ್ಚುತ್ತಿದ್ದಾರೆ.

ಶ್ರೀ ಡಿ.ಬಿ. ಇನಾಂದಾರ್: ಕೇಂದ್ರದಿಂದ ಹಬ್ಬದ ಸಕ್ಕರೆ ಅಲಾಟ್‌ಮೆಂಟ್ ವಿಳಂಬವಾಗಿ ಬಂದಿದೆ. ಕೊನೇ ಕಂತು ಬಂದದ್ದು 14-3-2001ಕ್ಕೆ.

ಶ್ರೀ ಆರಗಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಇವರು ಅಲಾಟ್‌ಮೆಂಟ್ ಮಾಡಿಸಿಕೊಂಡು ಬರಲು ಹೋಗಿದ್ದರ? ಇವರ ಅಧಿಕಾರಿಗಳು ಮಾಡಿದ್ದರ? ಹಸಿರು ಕಾರ್ಡುದಾರರು ಹೋಗಿ ಅಲಾಟ್‌ಮೆಂಟ್ ಮಾಡಿಸಿಕೊಂಡು ಬರಬೇಕೇನು? ಯಾರು ಮಾಡಬೇಕು? ಕೇಂದ್ರದ ಜೊತೆ ನೀವೇನು ಮಾತನಾಡಿದ್ದೀರಿ? ಬಡತನದ ರೇಖೆ ಕೆಳಗಿನವರನ್ನು ನೀವು ಇನ್ನೂ ಗುರ್ತಿಸಲೇ ಇಲ್ಲ. 60 ಲಕ್ಷ ಇದ್ದುದನ್ನು 20 ಲಕ್ಷ ಅಂತ ಬಜೆಟ್‌ನಲ್ಲಿ ತಂದಿದ್ದೀರಿ.

ಶ್ರೀ ಡಿ.ಬಿ. ಇನಾಂದಾರ್: ಕೇಂದ್ರವು ತನ್ನ ನೀತಿಯನ್ನು ಬದಲಾವಣೆ ಮಾಡಿದಾಗ ಅದನ್ನು ನಮ್ಮಲ್ಲಿ ಹಂಚಿಕೊಳ್ಳುವುದು ರಾಜ್ಯಸರ್ಕಾರಗಳ ಕೆಲಸ ಅಷ್ಟೆ. ನೀತಿ ರೂಪಿಸುವವರು ಯಾರು? ಕೇಂದ್ರ ಸರ್ಕಾರ. ಒಂದುವೇಳೆ, ಸಕ್ಕರೆ ಕೊಡುವುದನ್ನೇ ನಾವು ನಿಲ್ಲಿಸುತ್ತೇವೆ ಅಂತ ಕೇಂದ್ರ ಹೇಳಿದರೆ ರಾಜ್ಯಸರ್ಕಾರ ಯಾವ ರೀತಿ ಸಕ್ಕರೆ ಕೊಡಲು ಸಾಧ್ಯ? ಸಕ್ಕರೆ ಪೂರ್ಣ ನಿಯಂತ್ರಣ ಕೇಂದ್ರ ಸರ್ಕಾರದ ಕೈಲಿದೆ. ಅಲಾಟ್‌ಮೆಂಟ್ ಮಾಡುವವರೂ ಅವರೇ. ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಆರಗಜ್ಞಾನೇಂದ್ರ: ಬಿಪಿಎಲ್ ರೇಖೆ ಕೆಳಗಿರುವವರಿಗೆ ಸಕ್ಕರೆ ಸಿಗುತ್ತದೆ, ಅದಕ್ಕೆ ಕೇಂದ್ರ ಸರ್ಕಾರದ ನೀತಿಯೂ ಇದೆ. ಕಾರ್ಡುದಾರರಿಗೆ ಸಕ್ಕರೆ ಸಿಗಲಿಲ್ಲವೆಂದರೆ, ನೀವು ಅಲಾಟ್‌ಮೆಂಟ್ ಮಾಡಿಸಲು ಹೋಗಿದ್ದು ಯಾವಾಗ? ಹಂಚುವ ಕೆಲಸವನ್ನೂ ಕೇಂದ್ರ ಸರ್ಕಾರದವರೇ ಮಾಡಬೇಕಾ? ನಿಮ್ಮ ಇಲಾಖೆಯದು ತಾನೇ?

ಶ್ರೀ ಡಿ.ಬಿ. ಇನಾಂದಾರ್: ಹಸಿರುಕಾರ್ಡುದಾರರಿಗೆ ಸಕ್ಕರೆ ಅಲಾಟ್‌ಮೆಂಟನ್ನು ಕೇಂದ್ರಕೊಡುವುದು, ಅವರು ವಿಳಂಬ ಮಾಡಿದರೆ ನಾವು ಎಲ್ಲಿಂದ ತಂದು ಹಂಚಿಕೆ ಮಾಡಬೇಕು? ಪ್ರತಿ ಸಕ್ಕರೆ ಕಾರ್ಖಾನೆಗೂ ಇಂತಿಷ್ಟೇ ಮುಕ್ತಮಾರುಕಟ್ಟೆಯಲ್ಲಿ ಮಾರಬೇಕು ಅಂತ ಅವಕಾಶ ಕೊಡುತ್ತಾರೆ. ಸಕ್ಕರೆ ಕಂಟ್ರೋಲ್ ಇವತ್ತು ಕೇಂದ್ರದಲ್ಲಿದೆ. ಅವರು ಅಲಾಟ್‌ಮೆಂಟ್ ಕೊಡಲಿಲ್ಲವೆಂದರೆ ನಾವು ಹೋಗಿ ಯಾವ ಕಾರ್ಖಾನೆಯಿಂದ ತೆಗೆದುಕೊಳ್ಳಲಾಗುವುದಿಲ್ಲ.

ಶ್ರೀ ಎ. ಕೃಷ್ಣಪ್ಪ (ಸಕ್ಕರೆ ಸಚಿವರು): ಒಂದು ಕೆಜಿ ಸಕ್ಕರೆ ಅಲಾಟ್‌ಮಾಡುವ ಅಧಿಕಾರ ಈ ಸರ್ಕಾರಕ್ಕಿಲ್ಲ, ಅಲಾಟ್‌ಮೆಂಟ್ ಕೊಟ್ಟರೆ ನಾವು ಅದನ್ನು ರಿ-ಡಿಸ್ಟ್ರಿಬ್ಯೂಟ್

ಮಾಡುವ ಏಜೆಂಟ್‌ಗಳ ತರಹ. ಸಪ್ಲೋಸು, ಯಾವುದೋ ಎರಡು ಫ್ಯಾಕ್ಟರಿಗೆ ಅಲಾಟ್‌ಮೆಂಟ್ ಕೊಡುತ್ತಾರೆ ಅದರಲ್ಲಿ ಲೆವಿ ಎಷ್ಟು ನಾನ್‌ಲೆವಿ ಎಷ್ಟು ಅಂತ ಕಳುಹಿಸುತ್ತಾರೆ, ಕಳುಹಿಸಿದ ಮೇಲೆ ಅದನ್ನು ಲಿಫ್ಟ್ ಮಾಡಿ ನಾವು ಡಿಸ್ಟ್ರಿಬ್ಯೂಟ್ ಮಾಡುವುದು, ಅವರು ಅಲಾಟ್‌ಮೆಂಟ್ ಕಳಿಸದಲೇ ಇದ್ದರೆ ಲಿಫ್ಟ್ ಮಾಡುವ ಪ್ರಶ್ನೆ ಎಲ್ಲಿ ಬರುತ್ತದೆ? ಹಂಚಿಕೆ ಪ್ರಶ್ನೆ ಎಲ್ಲಿ ಬರುತ್ತದೆ? ಅದು ಅಲ್ಲಿ ನಡೆದಿದೆ, ನಮ್ಮದೇನೂ ತಪ್ಪಿಲ್ಲ ಮಹಾಸ್ವಾಮಿ ಅಂತ ಅವರು ಹೇಳುತ್ತಿರುವುದು?

ಶ್ರೀ ಆರಗಜ್ಞಾನೇಂದ್ರ: ಅಲಾಟ್‌ಮೆಂಟ್ ಮಾಡಿಸಿಕೊಂಡು ಬರಲು ನೀವು ಪ್ರಯತ್ನ ಮಾಡಬೇಕು. ಹಸಿರು ಕಾರ್ಡುದಾರನಿಗಲ್ಲ ನಾವು ಹೇಳುವುದು ಯುಗಾದಿ ಸಕ್ಕರೆಗಾಗಿ ನವ ದೆಹಲಿಗೆ ಹೋಗಿ ಅಲಾಟ್‌ಮೆಂಟ್ ಮಾಡಿಸಿಕೊಂಡು ಬರಬೇಕೇನು? ನೀವು ಯಾವಾಗ ಲೆಟರ್ ಬರೆದಿದ್ದೀರಿ, ಎಷ್ಟು ಐಎಎಸ್‌ಗಳು ಇಲ್ಲಿಂದ ಇದಕ್ಕಾಗಿ ದೆಹಲಿಗೆ ಹೋಗಿದ್ದಾರೆ? ಅವರೇನು ಮಾಡುತ್ತಿದ್ದಾರೆ? ಪುಗ್ಸಟ್ಟೆ ಸಂಬಳ ತಿನ್ನುವುದಕ್ಕೇನು ಇರುವುದು?

ಶ್ರೀ ಡಿ.ಬಿ. ಇನಾಂದಾರ್: ಅಲಾಟ್‌ಮೆಂಟ್ ಮಾಡುವ ಜವಾಬ್ದಾರಿ ಕೇಂದ್ರದ್ದು. ಹಸಿರುಕಾರ್ಡುದಾರರಿಗೇ ಆಗಲಿ, ಯಾರಿಗೇ ಆಗಲಿ, ಲೆವಿ ಏನು ಕಲೆಕ್ಟ್ ಮಾಡುತ್ತಾರೋ ಅದರಲ್ಲಿ ಪ್ರತಿ ಕಾರ್ಖಾನೆ ಇಂತಿಷ್ಟು ಕೋಟ ಅಂತ ಅಲಾಟ್ ಮಾಡುತ್ತಾರೆ. ರಾಜ್ಯಾದ್ಯಂತ ಈ ಕಾರ್ಖಾನೆಯಿಂದ ಇಷ್ಟು ಅಲಾಟ್‌ಮೆಂಟ್ ಮಾಡಿದ್ದೇವೆಂಬ ಒಂದು ಆದೇಶವನ್ನೂ ಕಳಿಸುತ್ತಾರೆ. ಅದನ್ನು ಮರುಹಂಚಿಕೆ ಮಾಡುವುದಷ್ಟೇ ನಮ್ಮ ಕೆಲಸ. ಅದು ಸರಿಯಾದ ರೀತಿ ಜನತೆಗೆ ಮುಟ್ಟುತ್ತದೋ ಇಲ್ಲವೋ ಎಂದು ನೋಡುವುದು ರಾಜ್ಯ ಸರ್ಕಾರ. ಇಷ್ಟು ಬಿಟ್ಟು ಮತ್ತೇನೂ ಕರ್ತವ್ಯ ನಮ್ಮದಿಲ್ಲ. ಹಂಚಿಕೆ ಮಾಡುವಲ್ಲಿ ವಿಳಂಬ ಮಾಡಿದ್ದು ಕೇಂದ್ರಸರ್ಕಾರ, ರಾಜ್ಯಸರ್ಕಾರವಲ್ಲ ಎಂಬುದನ್ನು ತಾವು ನೆನಪಿನಲ್ಲಿಡಬೇಕು.

ಶ್ರೀ ಆರಗಜ್ಞಾನೇಂದ್ರ: ನೀವು ಕೇವಲ ಕೇಂದ್ರದ ಕಡೆ ತೋರಿಸಿ ಸುಮ್ಮನೆ ಕೂರುವಂತಿಲ್ಲ. ನೀವು ಸಮಯಕ್ಕೆ ಸರಿಯಾಗಿ ನಮ್ಮ ರಾಜ್ಯಕ್ಕೆ ಎಷ್ಟು ಸಕ್ಕರೆ ಬೇಕಾಗುತ್ತದೆ? ಅಂತ ತಿಳಿಸಿರಬೇಕಾಗುತ್ತದೆ.

ಶ್ರೀ ಡಿ.ಬಿ. ಇನಾಂದಾರ್: ಇವತ್ತು ಸೀಮೆಎಣ್ಣೆಯನ್ನು 90 ಸಾವಿರ ಕಿಲೋಲೀಟರ್ ಕೊಡಿ ಅಂತ ಕೇಳಿದರೆ ಕೇವಲ 54 ಸಾವಿರ ಕಿಲೋಲೀಟರ್ ಮಾತ್ರ ಕೊಡುತ್ತಿದ್ದಾರೆ. ನಾವು ಕೇಳಿಲ್ಲ ಅಂತ ಅಲ್ಲ. ಇವತ್ತು ಸಕ್ಕರೆ ನೀತಿ ಮಾಡುವುದು ಕೇಂದ್ರ ಸರ್ಕಾರ, ಅವರು ಕೊಟ್ಟಿದ್ದನ್ನು ಹಂಚಿಕೆ ಮಾಡುವ ಕರ್ತವ್ಯ ಮಾತ್ರ ರಾಜ್ಯಸರ್ಕಾರದ್ದು. ನಮಗೆ 14ನೇ ತಾರೀಖು ಆದೇಶ ಕಳಿಸಿದ ನಂತರ 17ನೇ ತಾರೀಖಿಗೆ ನಾವು ಆದೇಶ ಕಳಿಸಿದ್ದೇವೆ, ಈ ಕಾರ್ಖಾನೆಯಿಂದ ಇಂತಿಷ್ಟು ಹಂಚಿಕೆ ಇಂತಿಂಥ ಜಿಲ್ಲೆಗಿದೆ, ಅಲ್ಲಿಂದ ಲಿಫ್ಟ್ ಮಾಡಿ ಹಂಚಿಕೆ ಮಾಡಿ ಅಂತ ಆದೇಶ ರಾಜ್ಯ ಸರ್ಕಾರ ಮಾಡಿದೆ.

ಶ್ರೀ ಆರಗಜ್ಞಾನೇಂದ್ರ: ನೀವು ಆದೇಶ ಕೊಟ್ಟಮೇಲೆ ನಮ್ಮ ಹಳ್ಳಿಗಳಿಗೆ ಸಕ್ಕರೆ ಹೋಗಲು ಎಷ್ಟು ದಿವಸ ಬೇಕು?

ಛೇರ್ಮನ್: ಸಚಿವರೇ ಕೇಂದ್ರ ಸರ್ಕಾರಕ್ಕೆ ಕಾಗದ ಬರೆಯಿರಿ, ನಿಮ್ಮ ಶಾಸಕರೇ ಗಲಾಟೆ ಮಾಡುತ್ತಿದ್ದಾರೆ ಆದಷ್ಟು ಜಾಗ್ರತೆ ಕಳಿಸಿ ಅಂತ.

ಶ್ರೀ ಡಿ.ಬಿ. ಇನಾಂದಾರ್: ಟೆಲಿಗ್ರಾಂ ಅನ್ನೇ ಕಳಿಸಿಕೊಡುತ್ತೇವೆ ಬಿಡಿ.

ಶ್ರೀ ಆರಗಜ್ಞಾನೇಂದ್ರ: ಇಲ್ಲ ಇಲ್ಲ, ಈ ರಾಜ್ಯದಲ್ಲಿರುವ ವಿತರಣಾ ವ್ಯವಸ್ಥೆ ಸರಿಯಿಲ್ಲ. ಅವರು ಹೇಳುತ್ತಾರೆ, 14ನೇ ತಾರೀಖು ಕೇಂದ್ರ ಕೊಟ್ಟಿದೆ, ನಾವು 17ನೇ ತಾರೀಖು ಮಧುಹಂಚಿಕೆಗೆ ಆರ್ಡರ್ ಮಾಡಿದ್ದೇವೆ ಅಂತ, ಅಂದರೆ ಹಬ್ಬ ಎಷ್ಟನೇ ತಾರೀಖು 25ನೇ ತಾರೀಖು, ಅಷ್ಟರೊಳಗೆ ಹೋಗುವುದಕ್ಕೆ ಆಗುವುದಿಲ್ಲ, ವ್ಯವಸ್ಥೆ ಇಲ್ಲವಾ, ರಸ್ತೆಗಳಿಲ್ಲವಾ, ವಾಹನಗಳಿಲ್ಲವಾ? ಈಗ ನ್ಯಾಯಬೆಲೆ ಅಂಗಡಿಗಳವರು ಏನು ಮಾಡುತ್ತಿದ್ದಾರೆ? ಇವರ ಗಮನದಲ್ಲಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. 30ನೇ ತಾರೀಖಿನವರೆಗೂ ಅವರೂ ಡಿಡಿ ತೆಗೆಯುವುದಿಲ್ಲ, 30ನೇ ತಾರೀಖು ಡಿಡಿ ತಂದು ಇವರಿಗೆ ಕೊಟ್ಟು ಸ್ವಲ್ಪ ದವಸಧಾನ್ಯ ಪಡೆದು ಹಳ್ಳಿಗೆ ಹೋಗಿ ಹಂಚಿ ಉಳಿದಿರುವುದನ್ನೆಲ್ಲ ಮಾರಿಕೊಂಡು ತಿನ್ನುತ್ತಿದ್ದಾರೆ. 1ನೇ ತಾರೀಖು ಹೋದವನಿಗೆ ಸಕ್ಕರೆ ಇಲ್ಲ, ಅಕ್ಕಿ ಇಲ್ಲ, ನೀವು 31ನೇ ತಾರೀಖು ಬಂದು ತಗೊಂಡುಹೋಗಬೇಕಾಗಿತ್ತು ಅಂತಾನೆ ಅವ. ನಮ್ಮ ಮಲೆನಾಡಿನಲ್ಲಂತೂ ನಾಲ್ಕು ಐದು ಕಿ.ಮೀ. ದೂರದಲ್ಲಿ ಮನೆಗಳಿವೆ, ಒಂದು ನ್ಯಾಯಬೆಲೆ ಅಂಗಡಿಯಿಂದ ಒಂದು ಸಲವೂ ನಮ್ಮ ರೈತರಿಗೆ ಸಿಗುವುದಿಲ್ಲ ಸ್ವಾಮಿ. ನೀವು ಹೇಳುತ್ತೀರಿ, ತಿಂಗಳೆಲ್ಲ ಇಟ್ಟುಕೊಂಡು ಹಂಚಿ ಅಂತ, ಅದನ್ನು ಮಾಡದ ನ್ಯಾಯಬೆಲೆ ಅಂಗಡಿಗಳ ಮೇಲೆ ಯಾವ ಅಧಿಕಾರಿಯಾದರೂ ಕ್ರಮ ತಗೊಂಡಿದ್ದಾನಾ? ಎರಡು ದಿವಸವೂ ಸಕ್ಕರೆ ಅಕ್ಕಿ ಇರುವುದಿಲ್ಲ. ಇದೇ ಸ್ಥಿತಿ ನಿಮ್ಮ ಸರ್ಕಾರದ್ದು ಕೂಡ. 17ನೇ ತಾರೀಖು ಆದೇಶ ಕೊಟ್ಟರೆ 25ನೇ ತಾರೀಖಿನ ಹಬ್ಬದವರೆಗೂ ಸಕ್ಕರೆ ಹೋಗುವುದಿಲ್ಲ. ಇನ್ನೂವರೆಗೂ ನನ್ನ ಜಿಲ್ಲೆ, ಕ್ಷೇತ್ರಕ್ಕೆ ಸಕ್ಕರೆ ಬಂದಿಲ್ಲ ಅಧಿಕಾರಿಗಳಿಲ್ಲವೆ? ವ್ಯವಸ್ಥೆ ಇಲ್ಲವಾ ಹಾಗಾದರೆ? ಕೇಂದ್ರ ಸರ್ಕಾರ ಕೊಡದೇ ಇದ್ದರೆ ನೀವು ಅಲ್ಲಿ ಹೋಗಿ ಧರಣಿ ಮಾಡಬೇಕು. ಸಕ್ಕರೆ ತರಿಸಿಕೊಂಡು ರಾಜ್ಯಕ್ಕೆ ಹಂಚುವ ಜವಾಬ್ದಾರಿ ನಿಮ್ಮದಿದೆ. ಒಳ್ಳೆಯ ಕೆಲಸವಾದರೆ ನಮ್ಮಮ್ಮ ಅನ್ನುತ್ತೀರಿ, ಏನೂ ಬರದೇ ಇದ್ದರೆ ಕೇಂದ್ರದ ಕಡೆ ಕೈತೋರಿಸುತ್ತೀರಿ. ಈ ಪಜೆನ್ನಿ ಮಾಡುವುದಕ್ಕಲ್ಲ, ಸರ್ಕಾರ ಇರುವುದು.

ಶ್ರೀ ಡಿ.ಬಿ. ಇನಾಂದಾರ್: ನ್ಯಾಯಬೆಲೆ ಅಂಗಡಿ ಬಗ್ಗೆ ಏನಾದರೂ ದೂರುಗಳಿದ್ದರೆ ಅವುಗಳ ಮೇಲೆ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ದೂರು ಕೊಡಬೇಕು. ನ್ಯಾಯ ಬೆಲೆ ಅಂಗಡಿಗಳನ್ನು ರದ್ದುಮಾಡುವ ಕಾರ್ಯಕ್ರಮವೂ ಇಪತ್ತಿದೆ. ಯಾವ ನ್ಯಾಯಬೆಲೆ ಸರಿಯಾಗಿ ವಿತರಣೆ ಮಾಡುವುದಿಲ್ಲ ಅವರ ಮೇಲೆ ದೂರು ಕೊಟ್ಟರೆ ಜಿಲ್ಲಾಧಿಕಾರಿಗಳು ಆಕ್ಷನ್ ತೆಗೆದುಕೊಳ್ಳುತ್ತಾರೆ. ಹಾಗೇ ಸಚಿವರು ಅವರ ಕ್ಷೇತ್ರದಲ್ಲಿ ಯಾವ ಅಂಗಡಿಗಳು ಸರಿಯಾಗಿ ವಿತರಣೆ ಮಾಡುತ್ತಿಲ್ಲ ಅವುಗಳ ಮೇಲೆ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳಿಗೆ ದೂರು ನೀಡಲಿ. ವಿಳಂಬವಾಗಲು ಅವರು ಎಲ್ಲ ಹೇಳಿದರು, ಅವರ ಮೇಲೆ ದೂರು ಕೊಡಿಸಲಿ, ನಾವು ಕ್ರಮ ತೆಗೆದುಕೊಂಡೇ ತೀರುತ್ತೇವೆ. ಈ ಹೊಸ ವ್ಯವಸ್ಥೆಯಲ್ಲಿ ನಾವು ಯಾವ ರೀತಿಯಾಗಿ ಸೀಮೆಎಣ್ಣೆ ಕೂಪನ್‌ಗಳನ್ನು ಕೊಡುತ್ತಿದ್ದೇವಲ್ಲ, ಅದೇ ರೀತಿ ಇವತ್ತು ಆಹಾರಧಾನ್ಯಗಳನ್ನು ಹಂಚುವ ಬಗ್ಗೆಯೂ ಕೂಡ ಕೂಪನ್‌ಗಳನ್ನು ಕೊಡುವ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಏಕೆಂದರೆ ಸರಿಯಾದ ರೀತಿಯಿಂದ ಆ ಜನತೆಯಿಂದ ಕೂಪನ್‌ಗಳನ್ನು ಪಡೆದು ಆ ಕೂಪನ್‌ಗಳಿಂದ ಯಾವ ಕುಟುಂಬಕ್ಕೆ ಎಷ್ಟು ಆಹಾರಧಾನ್ಯ ಸಿಗಬೇಕಾಗಿತ್ತೋ ಸೀಮೆಎಣ್ಣೆಯಾಗಲಿ, ಸಕ್ಕರೆಯಾಗಲಿ, ಗೋಧಿಯಾಗಲಿ, ಅಕ್ಕಿಯಾಗಲಿ, ಇವುಗಳು ಸಿಗಬೇಕಾಗಿತ್ತೋ ಕೂಪನ್ ಮುಖಾಂತರ ಅವನ್ನು ವಾಪಸ್ ಪಡೆಯುವ

ವ್ಯವಸ್ಥೆಯನ್ನು ತರತಕ್ಕ ದಿಕ್ಕಿನಲ್ಲಿ ಸಾಗುತ್ತಿದ್ದೇವೆ. ಇಲ್ಲಿ ಇರುವ ನ್ಯೂನತೆಗಳು ಏನು ಇವೆ, ಇವುಗಳನ್ನು ಸುಧಾರಿಸುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಕೂಪನ್ ಸಿಸ್ಟಂನ್ನು ನಾವು ತರುತ್ತಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲೂ ಬಿಲೋ ದಿ ಪಾವರ್ಟಿ ಲೈನ್ ಇರತಕ್ಕ ಜನತೆಯನ್ನು ಇವರುಗಳು ಹುಡುಕುವುದಕ್ಕೆ ಗ್ರಾಮಸಭೆಗಳನ್ನು ಮಾಡಿ ಯಾರು ಬಿಲೊ ದಿ ಪಾವರ್ಟಿ ಲೈನ್‌ನಲ್ಲಿವ್ದಾರೋ ಅವರನ್ನು ಹುಡುಕುವುದಕ್ಕೆ ಆದೇಶ ಕೂಡ ಸರ್ಕಾರದಿಂದ ಹೋಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಆ ಒಂದು ಜನತೆಯನ್ನು ಹುಡುಕಿ ಇವತ್ತು ಕಡಿಮೆ ದರದಲ್ಲಿ ಆಹಾರಧಾನ್ಯಗಳನ್ನು ವಿತರಣೆ ಮಾಡತಕ್ಕ ಕಾರ್ಯ ಕೂಡ ರಾಜ್ಯಸರ್ಕಾರದಿಂದ ನಡೆದಿದೆ ಎನ್ನುವುದನ್ನು ಸನ್ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಪ್ರತಿಯೊಂದು ಜಿಲ್ಲೆಯಲ್ಲೂ ಅದಷ್ಟು ಬೇಗನೆ ಅವರನ್ನು ಹುಡುಕುವ ವ್ಯವಸ್ಥೆಯನ್ನು ಮಾಡಬೇಕಾದ ಒಂದು ಅವಶ್ಯಕತೆ ಇದೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಾನು ಏನು ಕೇಳಿದ್ದೇನೋ ಅದನ್ನು ಬಿಟ್ಟು ಅದಕ್ಕೆ ತದ್ವಿರುದ್ಧವಾಗಿ ಮತ್ತೆಲ್ಲಾ ಅವರು ಹೇಳುತ್ತಿದ್ದಾರೆ. ಅವರು ಬಿಪಿಎಲ್ ಲಿಸ್ಟನ್ನು ಮಾಡುವುದಿಲ್ಲ, ಅವರ ಇಲಾಖೆಯವರ ಜೊತೆ ರೆವಿನ್ಯೂ ಇಲಾಖೆಯವರು ಸಹಕರಿಸುತ್ತಿಲ್ಲ. ಬೀಲೊ ದಿ ಪಾವರ್ಟಿ ಲಿಸ್ಟನ್ನು ಕೂಡ ಅವರು ಮಾಡಲಿಲ್ಲ, ಅವರಿಗೆ ಆಹಾರಧಾನ್ಯಗಳನ್ನು ಹಂಚುವುದಕ್ಕೂ ಕೂಡ ಆಗುವುದಿಲ್ಲ. ಅವರ ಅಧಿಕಾರಿಗಳನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಲಿಲ್ಲ. ಅವರ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಗ್ರಾಮೀಣ ಪ್ರದೇಶದ ಬಡವರಿಗೆ ಅಕ್ಕಿ ಸಕ್ಕರೆ ಪಡಿತರವನ್ನು ಹಂಚುವುದರಲ್ಲಿ ಸರ್ಕಾರ ವಿಫಲವಾಗಿದೆ. ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು.)

ಶ್ರೀ ಡಿ.ಬಿ. ಇನಾಮದಾರ್: ನ್ಯಾಯಬೆಲೆ ಅಂಗಡಿಗಳು ಸರಿಯಾಗಿ ನಡೆದಿಲ್ಲ ಎನ್ನುವುದರ ಬಗ್ಗೆ ನೀವು ಕಂಪ್ಲೇಂಟನ್ನು ಕೊಟ್ಟಿರುವ ಬಗ್ಗೆ ವಿವರಗಳನ್ನು ಕೊಡಬೇಕು. ಸುಮ್ಮನೆ ಸರಿಯಾಗಿ ನಡೆದಿಲ್ಲ ಎಂದು ಹೇಳುವುದು ಸರಿಯಲ್ಲ.

ವಿಷಯ: (v) ಕೊಪ್ಪಳದ ಎರಡು ರಸ್ತೆಗಳ ಅಗಲೀಕರಣ

ಶ್ರೀ ಕರಡಿ ಸಂಗಣ್ಣ (ಕೊಪ್ಪಳ): ಮಾನ್ಯ ಅಧ್ಯಕ್ಷರೇ, ಕೊಪ್ಪಳದಲ್ಲಿ ಎರಡು ರಸ್ತೆಗಳನ್ನು ಅಗಲೀಕರಣ ಮಾಡುವ ಬಗ್ಗೆ.

ಛೇರ್ಮನ್: ಯಾವ ವಿಚಾರದ ಮೇಲೆ ನೀವು ಮಾತನಾಡಿದರೆ, ಯಾವ ಸಚಿವರು ನಿಮಗೆ ಉತ್ತರವನ್ನು ಕೊಡಬೇಕು?

ಶ್ರೀ ಕರಡಿ ಸಂಗಣ್ಣ: ಮಾನ್ಯ ಚಿಮ್ಮನಕಟ್ಟಿಯವರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೇ, ಒಂದು ಪ್ರಶ್ನೆಯನ್ನು ಅವರು ಎತ್ತಿದ್ದಾರೆ, ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ರಸ್ತೆಗಳನ್ನು ಅಗಲ ಮಾಡಬೇಕೆಂದು ಹೇಳಿ ಅಲ್ಲಿ ಪುರಸಭೆಯವರು ಮತ್ತು ಜಿಲ್ಲಾಡಳಿತದವರು ಮನೆಗಳನ್ನು ಬೀಳಿಸುತ್ತಿದ್ದಾರೆ. ಅಲ್ಲಿಯ